**ಎಸ್.ಸಿ ನಂಃ 4-2022**
**ಪಿ.ಡಬ್ಲ್ಯುಃ 1**

**ದಿನಾಂಕಃ 07-07-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-**

ಪ್ರತಿವಾದಿ ಶಿವಕುಮಾರ ನನಗೆ 30 ವರ್ಷಗಳಿಂದ ಪರಿಚಯ. ನಾನು ಮತ್ತು ಪ್ರತಿವಾದಿ ವಿ.ಐ.ಎಲ್ ಕಂಪನಿಯಲ್ಲಿ ಒಟ್ಟಿಗೆ ಕೆಲಸಮಾಡುತ್ತಿದ್ದೆವು ಎಂದರೆ ಸರಿ. ನಾನು ಮತ್ತು ಪ್ರತಿವಾದಿ ಇಬ್ಬರು ಸದರಿ ಕಂಪನಿಯಲ್ಲಿ ಮುಚ್ಚುವ ಪೂರ್ವದಲ್ಲಿಯೇ ನಿವೃತ್ತರಾಗಿದ್ದೇವೆ ಎಂದರೆ ಸರಿ. ನಾನು 2013 ನೇ ಸಾಲಿನಲ್ಲಿ ನಿವೃತ್ತಿ ಆಗಿದ್ದೇನೆ. ಪ್ರತಿವಾದಿ ನನಗಿಂತ ಮೊದಲೇ ನಿವೃತ್ತಿ ಆಗಿದ್ದಾನೆ. ನಿವೃತ್ತಿ ಆದಾಗ ನನಗೆ 2000-00 ರೂ. ಪಿಂಚಣಿ ಬರುತ್ತಿತ್ತು, ಈಗ ಕೂಡ ಅಷ್ಟೇ ಹಣ ಬರುತ್ತದೆ. ನಮ್ಮ ಜೊತೆಯಲ್ಲಿ ಒಬ್ಬ ಟಿ.ಹೆಚ್.ಶ್ರೀನಿವಾಸ ಎಂಬುವವರು ಕೂಡ ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಭದ್ರಾವತಿಯಲ್ಲಿ ವಾಸಮಾಡುತ್ತಿದ್ದರು ಎಂದರೆ ಸರಿಯಲ್ಲ, ತರೀಕೆರೆಯಲ್ಲಿಯೇ ಇದ್ದರು. ಅವರು ಮೊದಲಿನಿಂದಲೂ ತರೀಕೆರೆಯಲ್ಲಿಯೇ ವಾಸವಿದ್ದಾರೆ. ನಾನು ಸದರಿ ಶ್ರೀನಿವಾಸ ಮತ್ತು ಪ್ರತಿವಾದಿ ಎಲ್ಲರೂ ವಿಶ್ವಾಸದಿಂದ ಇದ್ದೆವು ಎಂದರೆ ಸರಿ. ಪ್ರಕರಣ ಹಾಕುವ ಪೂರ್ವದಲ್ಲಿ ಭಾಂದವ್ಯ ಚೆನ್ನಾಗಿದ್ದು ಒಬ್ಬರ ಮನೆಗೆ ಒಬ್ಬರು ಬಂದು ಹೋಗಿ ಮಾಡುತ್ತಿದ್ದೆವು. ಈಗ ಮನೆಗೆ ಹೋಗದೇ ಇದ್ದರೂ ಕೂಡ ಕಂಡಾಗ ಮಾತನಾಡಿಸುತ್ತೇವೆ.

2. ನಿವೃತ್ತಿ ಆದ ನಂತರ ಪ್ರತಿವಾದಿ ಕಣ್ವ ಮಾರ್ಕೆಟಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಬ್ಯಾಂಕಿನಲ್ಲಿ 50,000-00 ರೂ. ನಿಶ್ಚಿತ ಠೇವಣಿ ಇಟ್ಟಿದ್ದೆ ಎಂದರೆ ಸರಿ, ಅದರ ಠೇವಣಿ ನಂ ಬಿ.ವಿ.ಟಿ 27926 ಎಂದು ಇತ್ತು ಎಂದರೆ ಸರಿ. ಸದರಿ ಠೇವಣಿಯನ್ನು ದಿಃ29-04-2019 ರಂದು ಇಡಲಾಗಿತ್ತು ಎಂದರೆ ಸರಿ. ಸದರಿ ಕಂಪನಿ ಈಗ ದಿವಾಳಿಯಾಗಿದೆ ಎಂದರೆ ಸರಿ. ನಾನು ಹಣ ಠೇವಣಿ ಇಡುವಾಗ ವಾರ್ಷಿಕ ಶೇ.12.6 ಬಡ್ಡಿ ದರ ಕೊಡುವುದಾಗಿ ಹೇಳಿದ್ದರು ಎಂದರೆ ಸರಿ. ಠೇವಣಿಯನ್ನು ಒಂದು ವರ್ಷದ ಅವಧಿಗೆ ಇಡಲಾಗಿತ್ತು ಎಂದರೆ ಸರಿ. ನನ್ನ ಖಾತೆಗೆ ತಿಂಗಳಿಗೆ 526-00 ರೂ. ಬಡ್ಡಿ ಜಮಾ ಆಗುತ್ತಿತ್ತು ಎಂದರೆ ಸರಿ.

(ಈ ಹಂತದಲ್ಲಿ ಸಮಯದ ಅಭಾವದ ಕಾರಣ ಪಾಟೀಸವಾಲನ್ನು ಮುಂದೂಡಲಾಯಿತು.)

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.